# ಕರ್ನಾಟಕ ವಿಧಾನ ಪರಿಷತ್

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 25 (64) |
| ಸದಸ್ಯರ ಹೆಸರು | : | ಶ್ರೀ ವೈ.ಎಂ.ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 04.12.2023 |
| ಉತ್ತರಿಸುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| (ಅ) | ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಆಯುಷ್ ತಜ್ಞ ವೈದ್ಯರುಗಳ ನೇಮಕಾತಿ ಮತ್ತು ನಿಯಮ ರೂಪಿಸಲಾಗಿದೆಯೇ; ಇದ್ದಲ್ಲಿ ಸಿ ಅಂಡ್ ಆರ್ ನ ಸಂಪೂರ್ಣ ಮಾಹಿತಿ ನೀಡುವುದು: | ಆಯುಷ್ ಇಲಾಖೆಯಲ್ಲಿ ವೈದ್ಯಾಧಿಕಾರಿಗಳು ( ಆಯುರ್ವೇದ / ಹೋಮಿಯೋಪಥಿ/ ಪ್ರಕೃತಿ ಚಿಕಿತ್ಸೆ & ಯೋಗ) ಎಂಬ ಪದನಾಮದಲ್ಲಿ ಹುದ್ದೆಗಳು ಸೃಜನೆಯಾಗಿದ್ದು, ಈ ಹುದ್ದೆಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ಈಗಾಗಲೇ ರೂಪಿಸಲಾಗಿರುತ್ತದೆ. ಆದರೆ ತಜ್ಞ ವೈದ್ಯರುಗಳ ಹುದ್ದೆಗಳು ಸೃಜನೆಯಾಗಿಲ್ಲದಿರುವುದರಿಂದ ವೃಂದ ಮತ್ತು ನೇಮಕಾತಿ (C&R) ನಿಯಮಗಳನ್ನು ರೂಪಿಸಲಾಗಿರುವುದಿಲ್ಲ. |
| (ಆ) | ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮದಡಿಯಲ್ಲಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರಿಗೆ ಹಾಗೂ ಅಲೋಪತಿ ವೈದ್ಯರಿಗೆ ನೀಡುತ್ತಿರುವ ವೇತನ ಎಷ್ಟು; ಈ ಇಬ್ಬರೂ ಗುತ್ತಿಗೆ ಆಧಾರದ ಮೇಲೆ ಒಂದೇ ರೀತಿಯ ಕೆಲಸ ಮಾಡುತ್ತಿದ್ದರೂ ಸಹ ವೇತನದಲ್ಲಿ ವ್ಯತ್ಯಾಸವಾಗಿರಲು ಕಾರಣವೇನು; ಇವರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಅನ್ವಯಿಸುವುದಿಲ್ಲವೇ; (ಮಾಹಿತಿ ನೀಡುವುದು) | ರಾಷ್ಟ್ರೀಯ ಆರೋಗ್ಯ ಅಭಿಯಾನದ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ (RBSK) ಕಾರ್ಯನಿರ್ವಹಿಸುತ್ತಿರುವ ವೈದ್ಯರಿಗೆ (BAMS & MBBS) ಭಾರತ ಸರ್ಕಾರದ National Health Mission (NHM)-Recording of Proceeding (RoP) ಅನುಮೋದನೆಯನ್ವಯ ರೂ. 46,894.76/-ಗಳನ್ನು ಮೂಲ ಮಾಸಿಕ ವೇತನವನ್ನಾಗಿ ನೀಡಲಾಗುತ್ತಿದೆ. |

| | | |
|---|---|---|
| (ಇ) | ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮದ ಅಭಿಯಾನದಡಿ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅಯುಷ್ ವೈದ್ಯರ ವೇತನವನ್ನು ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | National Health Mission (NHM)-Supplementary RoP for the FY 2023-24ರ ಅನುಮೋದನೆಯನ್ವಯ RBSK ಕಾರ್ಯಕ್ರಮದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಆಯುಷ್ ವೈದ್ಯರ (BAMS) ಮೂಲ ವೇತನವನ್ನು ರೂ.25,000/- ರಿಂದ ರೂ.46,894.76 ಗಳಿಗೆ ಹೆಚ್ಚಿಸಲಾಗಿರುತ್ತದೆ. |

ಸಂಖ್ಯೆ: ಆಕುಕ 234 ಪಿಐಎಂ 2023

(ದಿನೇಶ್ ಗುಂಡೂರಾವ್)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು